**ಮುಗಿದ ನಾಟಕ** ವಿಶ್ವಾಸಮತ ಯಾಚನೆಗೂ ಮೊದಲೇ ಕಮಲ್‌ನಾಥ್ ರಾಜೀನಾಮೆ | 18 ದಿನಗಳ ಮಧ್ಯಪ್ರದೇಶ ಬೃಹನ್ನಾಟಕಕ್ಕೆ ತೆರೆ | ಸಿಂಧಿಯಾ ವಿರುದ್ಧ ಕಮಲ್ ಕಿಡಿ

# ಮ.ಪ್ರದೇಶ: ಕಮಲ್ ಸರ್ಕಾರ ಪತನ; ಕಮಲ ಸರ್ಕಾರ ಶೀಘ್ರ

ಭೋಪಾಲ್: ಮಧ್ಯಪ್ರದೇಶದಲ್ಲಿ ಕಳೆದ ಕೆಲವು ದಿನಗಳಿಂದ ತಲೆದೋರಿದ ಬಿಕ್ಕಟ್ಟು ಶುಕ್ರವಾರ ತಾರ್ಕಿಕ ಅಂತ್ಯ ಕಂಡಿದೆ. ವಿಶ್ವಾಸಮತ ಯಾಚನೆ ಮಾಡುವ ಮುನ್ನವೇ ಮುಖ್ಯಮಂತ್ರಿ ಹುದ್ದೆಗೆ ಕಮಲ್‌ನಾಥ್ ರಾಜೀನಾಮೆ ನೀಡಿದ್ದಾರೆ. ಇದರಿಂದಾಗಿ 15 ತಿಂಗಳ ಕಾಂಗ್ರೆಸ್ ಸರ್ಕಾರ ಪತನಗೊಂಡಿದೆ.

ಜ್ಯೋತಿರಾದಿತ್ಯ ಸಿಂಧಿಯಾ ಬಣದ 22 ಕಾಂಗ್ರೆಸ್ ಶಾಸಕರು ನೀಡಿದ ರಾಜೀನಾಮೆಯಿಂದ ಬಹುಮತ ಕಳೆದುಕೊಂಡಿದ್ದ ಕಮಲ್‌ನಾಥ್, ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ರಾಜ್ಯಪಾಲ ಲಾಲ್‌ಜಿ ಟಂಡನ್ ಅವರನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸಿದರು. ಅಲ್ಲಿಗೆ 18 ದಿನಗಳ ಹೈಡ್ರಾಮಾಗೆ ತೆರೆ ಬಿತ್ತು.

ಈ ರಾಜೀನಾಮೆಯ ಬೆನ್ನಲ್ಲೇ, ಬಿಜೆಪಿಯಲ್ಲಿ ಸರ್ಕಾರ ರಚನೆ ಕುರಿತ ಚಟುವಟಿಕೆಗಳು ಆರಂಭವಾಗಿವೆ. ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್ ಹಾಗೂ ಮುಖಂಡ ನರೋತ್ತಮ ಮಿಶ್ರಾ ಅವರ ಹೆಸರುಗಳು ಸಿಎಂ ಹುದ್ದೆಗೆ ಕೇಳಿಬರುತ್ತಿವೆ. ಆದರೆ ಕೊನೆಗೆ ಚೌಹಾಣ್ ಅವರೇ ಮುಖ್ಯಮಂತ್ರಿ ಹುದ್ದೆಗೆ ಆಯ್ಕೆಯಾಗುವ ಸಾಧ್ಯತೆ ಹೆಚ್ಚು ಎಂದು ಮೂಲಗಳು ಹೇಳಿವೆ.



- 15 ತಿಂಗಳ ಅವಧಿಯ ಕಾಂಗ್ರೆಸ್ ಸರ್ಕಾರ ಪತನ
- ಬಿಜೆಪಿಯಲ್ಲಿ ಗರಿಗೆದರಿದ ಚಟುವಟಿಕೆ
- ಶಿವರಾಜ್‌ಗೆ ಮತ್ತೆ ಪಟ್ಟ ಸಾಧ್ಯತೆ
- ಸರ್ಕಾರ ರಚನೆಗೆ ಶೀಘ್ರ ಹಕ್ಕು ಮಂಡನೆ
- ಮಹಾರಾಜನ ಸಂಚಿನಿಂದ ಅಧಿಕಾರ ಭಂಗ: ಸಿಂಧಿಯಾ ವಿರುದ್ಧ ಕಮಲ್ ಕಿಡಿ

**ಮಧ್ಯಪ್ರದೇಶ ಬಲಾಬಲ**

| ಒಟ್ಟು | 230 |
| --- | --- |
| ಖಾಲಿ | 24 |
| ಬಹುಮತಕ್ಕೆ | 104 |
| ಬಿಜೆಪಿ | 107 |
| ಕಾಂಗ್ರೆಸ್+ | 99 |

'ಅಧಿಕಾರದಾಹಿ ಮಹಾರಾಜ (ಸಿಂಧಿಯಾ), ಅವರ 22 ಬೆಂಬಲಿಗ ಶಾಸಕರು ಹಾಗೂ ಬಿಜೆಪಿ ಸಂಚಿನಿಂದ ಪ್ರಜಾಸತ್ತಾತ್ಮಕ ಮೌಲ್ಯಗಳು ಕುಸಿದಿವೆ. ಸಂವಿಧಾನದ ಮೌಲ್ಯ ರಕ್ಷಿಸಲು ನಾನು ರಾಜೀನಾಮೆ ನೀಡಿದ್ದೇನೆ. ನಾನೆಂದೂ ಕುದುರೆ ವ್ಯಾಪಾರ ಮಾಡಿಲ್ಲ' ಎಂದು ರಾಜೀನಾಮೆ ಘೋಷಣೆಯ ವೇಳೆ ಸುದ್ದಿಗಾರರಿಗೆ ತಿಳಿಸಿದ ಕಮಲ್‌ನಾಥ್, 'ಸಮಯ ಎನ್ನುವುದು ಸೈಕಲ್ ಇದ್ದಂತೆ' ಎಂದು ಮಾರ್ಮಿಕವಾಗಿ ಹೇಳಿದರು.



ಆದರೆ ಸಿಂಧಿಯಾ, 'ಇದು ಜನತೆಯ ವಿಜಯ ಸೇವೆಯು ರಾಜಕೀಯದ ಮೂಲ ಉದ್ದೇಶ ಆಗಿರಬೇಕು. ಆದರೆ ಈ ಸರ್ಕಾರ ಈ ಹಾದಿಯಿಂದ ವಿಮುಖವಾಗಿತ್ತು' ಎಂದು ಹೇಳಿದ್ದಾರೆ.

**ಎಲ್ಲರಿಗಿಂತ ಮೊದಲೇ ತಿಳಿಯುವುದು ಇಲ್ಲೇ**

ಮಧ್ಯಪ್ರದೇಶದ ಕಮಲ್‌ನಾಥ್ ವಿಶ್ವಾಸಮತ ಯಾಚನೆಗೂ ಮೊದಲೇ ರಾಜೀನಾಮೆ ನೀಡುವ ಸಾಧ್ಯತೆ ಇದೆ ಎಂದು ಶುಕ್ರವಾರವೇ ಕನ್ನಡಪ್ರಭ ವರದಿ ಮಾಡಿತ್ತು.


ಮಪ್ರ: ವಿಶ್ವಾಸಮತಕ್ಕೆ ಮುನ್ನ ಕಮಲನಾಥ್ ರಾಜೀನಾಮೆ?